# ಶ್ರೀಮಾತೆಯವರೊಡನೆ ಮಾತುಕತೆ




ಇನ್ನೊಮ್ಮೆ ರಾತ್ರಿ ಹೋಗಿದ್ದೆ. ಶ್ರೀಮಾತೆಯವರು ವಿಶ್ರಮಿಸುತ್ತಿದ್ದರು. ಹತ್ತಿರದಲ್ಲೇ ಕಪ್ಪನೆಯ ಸೊಸೆ (ಶ್ರೀಮಾತೆ ಈ ಹೆಸರಿನಿಂದಲೇ ಕರೆಯುತ್ತಿದ್ದರು) ಕುಳಿತಿದ್ದಾಳೆ. ನಾನು ನಮಸ್ಕರಿಸಲೆಂದೇ ಶ್ರೀಮಾತೆ ಎದ್ದು ಕುಳಿತರು. ನಮಸ್ಕರಿಸಿದ ನಂತರ ನನ್ನ ಕ್ಷೇಮವನ್ನು ವಿಚಾರಿಸಿ ಮತ್ತೆ ಮಲಗಿದರು. ಸ್ವಲ್ಪ ಕಾಲು ಒತ್ತಲು ಹೇಳಿದರು. ಅದೂ ಇದೂ ಮಾತನಾಡುತ್ತಾ ಅವರು ಹೇಳಿದರು, "ನೋಡು, ಸೃಷ್ಟಿಯ ಮೊದಲಲ್ಲಿ ದೇವರು ಮನುಷ್ಯನನ್ನು ಸತ್ತ್ವಪ್ರಧಾನವಾಗಿ ಸೃಷ್ಟಿಸಿದ. ಆದ್ದರಿಂದ ಜನ ಜ್ಞಾನವನ್ನು ಕೂಡ ಪಡೆದರು. ಈ ಸಂಸಾರ ಅನಿತ್ಯ ಎಂದು ಹುಟ್ಟಿನಿಂದ ತಿಳಿದಿದ್ದರು. ಅವರು ಭಗವಂತನ ಸ್ಮರಣೆ ಮಾಡಲು ತಪಸ್ಸನ್ನು ಕೈಗೊಂಡರು. ಬೇಗನೆ ಮುಕ್ತಿ ಪಡೆದರು. ಆಗ ದೇವರ ಕಾರ್ಯ ಕೈಗೂಡಲಿಲ್ಲ. ಸಂಸಾರ ಲೀಲಾಕಾರ್ಯ ನಿಂತೇ ಹೋಯಿತು. ಆದ್ದರಿಂದ ತಮಸ್ಸನ್ನು ಸೇರಿಸಿ ಸೃಷ್ಟಿ ಮಾಡಿದನು. ಇದರಿಂದಾಗಿ ಸಂಸಾರಲೀಲೆ ಚೆನ್ನಾಗಿ ನಡೆಯಲು ಆರಂಭವಾಯಿತು." ಈ ರೀತಿ ಶ್ರೀಮಾತೆ ಸೃಷ್ಟಿಯ ಸಂಬಂಧವಾಗಿ ಒಂದು ಸುಂದರ ವ್ಯಾಖ್ಯಾನವನ್ನು ಮಾಡಿದರು. ಮಾತು ಮುಂದುವರೆಸುತ್ತಾ, "ಹಿಂದೆ ಎಷ್ಟೊಂದು ನಾಟಕ, ಹರಿಕಥೆ ಎಲ್ಲಾ ನಡೆಯುತ್ತಿತ್ತು. ನಾವು ಇವೆಲ್ಲವನ್ನೂ ಅಲ್ಲೇ ಕೇಳಿದ್ದು. ಈಗಂತೂ ಆ ರೀತಿ ಇಲ್ಲವೇ ಇಲ್ಲ" ಎಂದರು.

ಇಷ್ಟರಲ್ಲಿ ಕಪ್ಪನೆಯ ಸೊಸೆ ಪಕ್ಕದ ಕೋಣೆಯಲ್ಲಿ ನಳಿನಿ, ಮಾಕು ಜೊತೆ ಸೇರಿಕೊಂಡು ಜೋರಾಗಿ ಏನನ್ನೋ ಓದಲು ಆರಂಭಿಸಿದಳು. ಇದನ್ನು ಕೇಳಿ ಶ್ರೀಮಾತೆ, "ನೋಡಿದೆಯಾ ಅಮ್ಮಾ, ಕೆಳಗಡೆ ಜನರಿದ್ದಾರೆ, ಅದಲ್ಲದೆ ಮಲಗಿದ್ದಾರೆ ಎಂಬ ಅರಿವೇ ಇಲ್ಲದೆ ಹೇಗೆ ಓದುತ್ತಿದ್ದಾಳೆ?" ಎಂದು ಹೇಳಿದರು. ಅಷ್ಟರಲ್ಲಿ ರಾಧಿಯ ತಾಯಿ ಬಂದು, "ಲಕ್ಷ್ಮೀ ದೀದಿ ಮತ್ತಿತರರು ನವದ್ವೀಪಕ್ಕೆ ಹೋಗುತ್ತಾರೆ. ನನ್ನನ್ನು ಮಾತ್ರ ನೀನು ಕಳುಹಿಸುತ್ತಿಲ್ಲ" ಎಂದು ಹೇಳಿ ಕೋಪದಿಂದ ಹೊರಟುಹೋದಳು. 'ಹೇಗೆ ತಾನೆ ಕಳುಹಿಸಲಿ ಹೇಳಮ್ಮಾ? ಅವಳಂತೂ (ಲಕ್ಷ್ಮೀ ದೀದಿ) ಭಕ್ತಳು. (ವೈಷ್ಣವ ಭಕ್ತಳು – ಅವಳ ಉಪಾಸ್ಯದೇವತೆ ರಾಧಾಕೃಷ್ಣ. ಶ್ರೀರಾಮಕೃಷ್ಣರೇ ಅವಳಿಗೆ ಮಂತ್ರದೀಕ್ಷೆ ಕೊಟ್ಟಿದ್ದಾರೆ.) ಇತರ ಭಕ್ತರೊಡನೆ ಹಾಡಿ ಕುಣಿದಾಡುತ್ತಾಳೆ. ಜಾತಿವಿಚಾರವಿಲ್ಲದೆ (ಭಕ್ತರಿಗೆ ಜಾತಿ ಇಲ್ಲವಾದ್ದರಿಂದ) ಅವರ ಜೊತೆ ಊಟ ಮಾಡಿದರೂ ಮಾಡಿಯಾಳು. ಇವೆಲ್ಲಾ ಇವಳಿಗೆ (ಸುರಬಾಲಳಿಗೆ) ಸರಿಹೋಗುವುದಿಲ್ಲ. ವಾಪಸ್ಸು ಬಂದು ಲಕ್ಷ್ಮಿಯನ್ನು ಆಡಿಕೊಳ್ಳುತ್ತಾಳೆ. ನೀನು ಲಕ್ಷ್ಮಿಯನ್ನು ನೋಡಿದ್ದೀಯಾ?'

ನಾನು: "ಇಲ್ಲಮ್ಮಾ"

ಶ್ರೀಮಾತೆ: "ದಕ್ಷಿಣೇಶ್ವರದಲ್ಲೇ ಇದ್ದಾಳೆ. ದಕ್ಷಿಣೇಶ್ವರಕ್ಕಾದರೂ ಹೋಗಿದ್ದೀಯ, ತಾನೆ?"

ನಾನು: "ಹೌದಮ್ಮಾ, ಬಹಳ ಸಲ ಹೋಗಿದ್ದೇನೆ. ಆದರೆ ಅವರು ಅಲ್ಲಿದ್ದಾರೆ ಎಂದು ಗೊತ್ತಿರಲಿಲ್ಲ."

ಶ್ರೀಮಾತೆ : "ದಕ್ಷಿಣೇಶ್ವರದಲ್ಲಿ ನಾನು ನಹಬತ್‌ನಲ್ಲಿರುತ್ತಿದ್ದೆ. ಅದನ್ನು ನೋಡಿದ್ದೀಯಾ?"

ನಾನು : "ಹೊರಗಡೆಯಿಂದ."

ಶ್ರೀಮಾತೆ: "ಒಳಗಡೆ ಹೋಗಿ ನೋಡು. ಎಷ್ಟು ಚಿಕ್ಕ ಕೊಠಡಿ. ಅದರಲ್ಲೇ ನನ್ನ ಸಂಸಾರವೆಲ್ಲಾ ನಡೆಯುತ್ತಿತ್ತು. ಮೊದಲ ಬಾರಿ ಕೊಲ್ಕತಾಗೆ (ಕಾಂಸಾರಿಪಾಡದ ಗಿರೀಶ್ ಭಟ್ಟಾಚಾರ್ಯರ ಮನೆ. ಶ್ರೀಮಾತೆ ಆಗ ಅವರ ತಮ್ಮ ಪ್ರಸನ್ನನ ಮನೆಯಲ್ಲಿ ಬಂದಿಳಿದಿದ್ದರು) ಬಂದಾಗ ನಲ್ಲಿಗಿಲ್ಲಿ ನೋಡೇ ಇರಲಿಲ್ಲ."

"ಒಮ್ಮೆ ಬಚ್ಚಲು ಮನೆಗೆ ಹೋಗಿ ನೋಡಿದರೆ ಪೈಪ್‌ನಿಂದ 'ಸೋ, ಸೋ' ಎಂದು ಹಾವಿನ ಹಾಗೆ ಬುಸುಗುಟ್ಟುವ ಶಬ್ದ ಬರುತ್ತಿತ್ತು. ನಾನಂತೂ ಭಯದಿಂದ ತಕ್ಷಣ ಓಡಿ ಬಂದು (ಹೆಂಗಸರ ಕೋಣೆಯಲ್ಲಿ) ಒಂದೇ ಉಸುರಿನಲ್ಲಿ ಹೇಳತೊಡಗಿದೆ, "ನಲ್ಲಿಯಲ್ಲಿ ಹಾವು ಬಂದಿದೆ. ಬುಸುಗುಡುತ್ತಿದೆ. ನೋಡುವೆಯಂತೆ ನಡೆ" ಎಂದು. ಅವರೆಲ್ಲರೂ ನಗುತ್ತಾ, 'ಅಮ್ಮಾ, ಅದು ಹಾವಲ್ಲ. ನೀರು ಬರುವ ಮೊದಲು ಗಾಳಿಯಿಂದಾಗಿ ಹಾಗೆ ಶಬ್ದ ಆಗುತ್ತದೆ' ಎಂದು ಹೇಳಿದರು. ಆಗ ನಾನಂತೂ ಹೊಟ್ಟೆ ಬಿರಿಯುವಷ್ಟು ನಗಾಡಿದೆ." ಇದನ್ನು ವಿವರಿಸುತ್ತಾ, ಶ್ರೀಮಾತೆ ಕೂಡ ನಗಲಾರಂಭಿಸಿದರು.

ನಿಷ್ಕಪಟವಾಗಿದ್ದ ಆ ನಗು ಎಷ್ಟು ಅದ್ಭುತ! ನನಗೂ ನಗು ತಡೆಯಲಾಗಲಿಲ್ಲ. ನಮ್ಮ ಶ್ರೀಮಾತೆ ಎಷ್ಟು ಸರಳರು ಎಂದು ಭಾವಿಸಲಾರಂಭಿಸಿದೆ. *(ಮುಂದುವರಿಯುವುದು)*